‘‘ಥ್ಯಾಂಕ್ಸ್ ಬಾಸ್. ನಿಮಗೆ ಪಾರ್ಟಿ ಕೊಡೋಣ ಅಂತ ಆಸೆ. ಬಾಟಲಿ ಮುಟ್ಟಲ್ಲ, ಮಾಂಸ ತಿನ್ನಲ್ಲ ಅನ್ನೋ ನಿಮ್ಮನ್ನ ಹೆಂಗೆ ಖುಷಿ ಪಡಿಸೋದೋ ಗೊತ್ತಾಗಲ್ಲ’’ ಎಂದು ನನ್ನ ಸಾತ್ವಿಕತೆಯನ್ನು ಗೇಲಿ ಮಾಡಿ ಹೊರಟ. ‘‘ಅಲ್ಲಿ ಏನಾದ್ರೂ ಕುರಿ, ಕೊಡಲಿ ಹಿಡಕೊಂಡು ಆಫೀಸಿಗೆ ಹೋದ್ಯೋ, ಕಂಬಿ ಎಣಿಸೋ ಹಂಗೆ ಮಾಡ್ತಾರೆ. ನನ್ನ ಹಾಗೆ ಬಾಟಲಿ ಮುಟ್ಟದ, ಮಾಂಸ ತಿನ್ನದ ಜನ ಅಲ್ಲಿರಲ್ಲ. ಹುಷಾರು...’’ ಎಂದು ಅವನನ್ನು ಎಚ್ಚರಿಸಿ ಕಳುಹಿಸಿದೆ. ‘‘ಡೋಂಟ್ ವರಿ ಬಾಸ್... ಎವರಿಥಿಂಗ್ ವಿಲ್ ಬಿ ಓಕೆ’’ ಎಂದು ಅಭಯ ನೀಡಿ ಇಂಗ್ಲೆಂಡಿಗೆ ಹಾರಿದ.

ನಿರೀಕ್ಷೆಯಂತೆ ಅಲ್ಲಿಯೂ ವೆಂಕಯ್ಯ ಯಶಸ್ಸನ್ನು ಸಾಧಿಸಿದ. ಗ್ರಾಹಕರಂತೂ ಅವನ ಕೆಲಸದ ಅಚ್ಚುಕಟ್ಟಿಗೆ ಬೆರಗಾಗಿ ಹೋದರು. ನಾನು ಇಂಗ್ಲಿಷ್ ಭಾಷೆ ತೊಡಕಾಗಬಹುದು ಎಂದು ಎಣಿಸಿದ್ದೆ. ಆದರೆ ಅವನು ಅದ್ಯಾವ ಬಗೆಯಲ್ಲಿ ಅವರೊಡನೆ ಮಾತಾಡುತ್ತಿದ್ದನೋ ದೇವರೇ ಬಲ್ಲ. ಎಲ್ಲರೂ ಅವನನ್ನು ಸರದಿಯಲ್ಲಿ ವಾರಾಂತ್ಯದಲ್ಲಿ ಪಾರ್ಟಿಗೆಂದೋ, ಪಿಕ್‌ನಿಕ್ ಎಂದೋ ಕರೆದುಕೊಂಡು ಹೋಗುತ್ತಿದ್ದಾರೆಂದು ವರದಿ ಬರಲಾರಂಭಿಸಿತು. ಅಲ್ಲಿಯ ಹುಡುಗಿಯೊಬ್ಬಳ ಜೊತೆ ಅವನ ಸ್ನೇಹ ಸ್ವಲ್ಪ ಜಾಸ್ತಿಯಾಗುತ್ತಿದೆ ಎಂದು ಮತ್ತೊಂದು ಇ–ಮೇಲ್ ನನಗೆ ಬಂತು. ‘ವರದಕ್ಷಿಣೆಗೆ ಬಾಯಿ ತೆರಕೊಂಡು ಇದ್ದಾನೆ... ಈ ಹೊತ್ತಿನಲ್ಲಿ ಪ್ರೀತಿ ಮಾಡೋ ತಪ್ಪು ಅವನು ಮಾಡಲ್ಲ’ ಎಂದು ನಾನು ಅದನ್ನು ಗಂಭೀರವಾಗಿ ತೆಗೆದುಕೊಳ್ಳಲು ಹೋಗಲಿಲ್ಲ. ಆರು ತಿಂಗಳಿಗೆ ಎಂದು ಹೋದವನ ವಾಸವನ್ನು ಗ್ರಾಹಕರು ಒತ್ತಾಯದಿಂದ ಎರಡು ವರ್ಷಕ್ಕೆ ಹೆಚ್ಚಿಸಿದರು.

ಆರು ತಿಂಗಳಿಗೆಲ್ಲಾ ಅವನ ಇಂಗ್ಲೆಂಡ್ ವ್ಯಾಮೋಹ ಮುಗಿದುಹೋಯ್ತು. ಮತ್ತೆ ಮತ್ತೆ ಫೋನ್ ಮಾಡಿ ‘ಇದು ಚಿಕ್ಕ ದೇಶ. ಬೋರ್ ಹೊಡೀತಾ ಇದೆ. ನನ್ನ ಅಮೆರಿಕಾಕ್ಕೆ ಕಳುಹಿಸು’ ಎಂದು ಒತ್ತಾಯ ಮಾಡತೊಡಗಿದ. ಇಂಗ್ಲೆಂಡ್‌ಗೆ ಹೋಗಿ ಬಂದ ಹುಡುಗನಿಗಿಂತಲೂ ಅಮೆರಿಕಾಕ್ಕೆ ಹೋಗಿ ಬಂದ ಹುಡುಗನಿಗೆ ಹೆಚ್ಚಿನ ವರದಕ್ಷಿಣೆ ಸಿಗುತ್ತದೆಂದು ಹೇಳಿದ. ಆದರೆ ನಾನು ಈ ಬೇಡಿಕೆಗೆ ಸೊಪ್ಪು ಹಾಕಲಿಲ್ಲ. ನಮ್ಮ ಕಂಪೆನಿಯು ಇಂಗ್ಲೆಂಡ್ ಒಡೆತನಕ್ಕೆ ಸೇರಿದ್ದಾಗಿತ್ತು. ಆದ್ದರಿಂದ ಅಮೆರಿಕದ ಗ್ರಾಹಕರು ಅಪರೂಪವಾಗಿದ್ದರು. ಆಗೊಮ್ಮೆ ಈಗೊಮ್ಮೆ ಸಿಕ್ಕರೂ ಕೆಲವೇ ಕೆಲವರಿಗೆ ಮಾತ್ರ ಅಲ್ಲಿಗೆ ಹೋಗುವ ಅವಕಾಶ ಸಿಗುತ್ತಿತ್ತು. ಜೊತೆಗೆ ಈಗಿನ ಗ್ರಾಹಕರು ವೆಂಕಯ್ಯನ ಕೆಲಸದಿಂದ ಸಂತೃಪ್ತಿ ಹೊಂದಿದ್ದರು. ಅವನ ವಾಸವನ್ನು ಎರಡು ವರ್ಷಕ್ಕೆ ಹೆಚ್ಚು ಮಾಡಿದ್ದರು. ಅಲ್ಲಿ ಒಂದಿಷ್ಟು ಕಾಲ ದುಡಿಯದೆ, ಬರೀ ನಮ್ಮ ಸ್ವಾರ್ಥವನ್ನೇ ಮುಖ್ಯ ಮಾಡಿಕೊಂಡು ಮತ್ತೊಂದು ದೇಶಕ್ಕೆ ಹಾರಿದರೆ ಹೇಗೆ? ಎಷ್ಟೇ ಹಣದ ವ್ಯವಹಾರವೆಂದರೂ ಒಂದಿಷ್ಟಾದರೂ ನೈತಿಕತೆ ಇರದಿದ್ದರೆ ಹೇಗೆ? ಆ ಕಾರಣದಿಂದ ನಾನು ಅವನ ಬಯಕೆಗೆ ಸೊಪ್ಪು ಹಾಕಲಿಲ್ಲ. ‘ಹೇಗೂ ನಂಗೆ ವರದಕ್ಷಿಣೆಯಲ್ಲಿ ಐದು ಪರ್ಸೆಂಟ್ ಕೊಡಬೇಕಲ್ಲಾ? ಅದನ್ನು ಬಿಟ್ಟು ಬಿಡು. ಡೌರಿ ಸರಿ ಹೋಗುತ್ತೆ’ ಎಂದು ನಾನು ರೇಗಿಸಿ ಸುಮ್ಮನಾಗಿಸಿದೆ.

ಈ ಹೊತ್ತಿನಲ್ಲಿ ಒಂದು ಪ್ರಮಾದ ಜರುಗಿತು. ವೆಂಕಯ್ಯನ ತಂದೆಯ ಆರೋಗ್ಯ ಕ್ಷೀಣಿಸಿತು. ಹೋಗಿಯೇ ಬಿಡುತ್ತಾರೆಂದು ಅವನಿಗೆ ಫೋನ್ ಮಾಡಿ, ತಕ್ಷಣ ಬರಬೇಕೆಂದು ಒತ್ತಾಯ ಹೇರಲಾರಂಭಿಸಿದರು. ವೆಂಕಯ್ಯ ಊರಿಗೆ ವಾಪಸ್ಸು ಬರುತ್ತೇನೆಂದು ಹಟ ಮಾಡತೊಡಗಿದ. ನನಗೆ ಈ ಸಂದಿಗ್ಧ ಕುತ್ತಿಗೆಗೆ ಬಂತು. ಬೇಡ ಎಂದರೆ ಒಂದು ಸಂಕಟ, ಬಾ ಎಂದರೆ ಮತ್ತೊಂದು ಸಂಕಟ. ವಿಮಾನ ಪ್ರಯಾಣಕ್ಕೆ ಏನಿಲ್ಲವೆಂದರೂ ಒಂದು ಲಕ್ಷದ ತನಕ ಹಣ ಖರ್ಚಾಗುತ್ತಿತ್ತು. ಆ ಐಟಿ ಸುವರ್ಣ ದಿನಗಳಲ್ಲಿ ಅದನ್ನೆಲ್ಲಾ ಕಂಪೆನಿಯೇ ಭರಿಸುತ್ತಿತ್ತು. ಜೊತೆಗೆ ಅವನಿಗೆ ದಿನಕ್ಕೆ